ಮಾಡಿದವರು ಇದ್ದರೆ, ಮಾನ್ಯ ಸದಸ್ಯರು ತಿಳಿಸಬೇಕು. ಅಂಥವರನ್ನು ತೆಗೆದುಕೊಳ್ಳುವಂಥ ವ್ಯವಸ್ಥೆಯನ್ನು ನಾವು ಮಾಡುತ್ತೇವೆ.

ಶ್ರೀಮತಿ ಮೋಟಮ್ಮ:- ಈಗ ಮಂತ್ರಿಗಳು ಉತ್ತರ ಹೇಳಬೇಕಾದರೆ ಟಿ.ಸಿ.ಹೆಚ್ ಆಗದಿದ್ದರೆ ಹುದ್ದೆ ಕೊಡಲಿಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ. ಮಿನಿಮಂ ಪಿ.ಯು.ಸಿ ಮಾಡಿರುವವರು ಸಿಕ್ಕಿದಾಗ ಏತಕ್ಕೆ ಅಪಾಯಿಂಟ್‌ಮೆಂಟ್ ಮಾಡಿಕೊಂಡು ಟ್ರೈನಿಂಗ್ ಕೊಡಲಿಕ್ಕೆ ಪ್ರಯತ್ನ ಮಾಡಬಾರದು? ಹಿಂದೆ ಎಸ್.ಸಿ, ಎಸ್.ಟಿ.ಯ ಅಭ್ಯರ್ಥಿಗಳನ್ನು ಡೈರೆಕ್ಟ್ ಅಪಾಯಿಂಟ್‌ಮೆಂಟ್ ಮಾಡಿ ನಂತರ ದಸರಾ, ಕ್ರಿಸ್‌ಮಸ್ ಮತ್ತು ಸಮ್ಮರ್, ಹಾಲಿಡೇಸ್‌ನಲ್ಲಿ ಟಿ.ಸಿ.ಹೆಚ್. ಟ್ರೈನಿಂಗ್ ಕೊಟ್ಟಿದ್ದಾರೆ. ಆ ರೀತಿ ಪ್ರಯತ್ನ ಏತಕ್ಕೆ ಮಾಡಬಾರದು? ಮೇಷ್ಟ್ರುಗಳು ಎಂದರೆ ಬಹಳ ಬಡತನದಲ್ಲಿರುವವರು ಎಂಬ ವಾಡಿಕೆ ಬಂದಿದೆ. ಅಂಥ ಹೆಣ್ಣುಮಕ್ಕಳಿಗೆ ಜೀವನ ನಡೆಸುವುದು ಕಷ್ಟವಾಗುತ್ತದೆ. ಇಂಥ ಸಂದರ್ಭದಲ್ಲಿ ಆ ಒಂದು ಅವಕಾಶ ಏತಕ್ಕೆ ಕೊಡಬಾರದು?

ಡಾ. ಹೆಗ್ಗಪ್ಪ ಡಿ. ಲಮಾಣಿ:- ಆ ವ್ಯವಸ್ಥೆಯನ್ನು ಬಹಳ ಹಿಂದೆಯೇ ನಿಲ್ಲಿಸಲಾಗಿದೆ. ಟಿ.ಸಿ.ಹೆಚ್. ತರಬೇತಿ ಇಲ್ಲದೆ ಅಧ್ಯಾಪಕರನ್ನು ತೆಗೆದುಕೊಳ್ಳುವ ವ್ಯವಸ್ಥೆಯನ್ನು ನಿಲ್ಲಿಸಲಾಗಿದೆ. ಅಂಥ ಪ್ರಸಂಗ ಇದ್ದರೆ ಸರ್ಕಾರ ಪರಿಶೀಲಿಸುತ್ತದೆ.

ವಿಷಯ:- ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರುಗಳ ಕೊರತೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೧:- (೨೯೧)
ಶ್ರೀ ಬಿ. ರಾಜುಗೌಡ (ಹನೂರು)
ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಎಷ್ಟು ಶಿಕ್ಷಕರ ಕೊರತೆ ಇದೆ.
ಆ. ಇದನ್ನು ತುಂಬಲು ಸರ್ಕಾರದವರು ಕಾಲಮಿತಿ ಹಾಕಿಕೊಂಡಿರುವರೇ ?
ಇ. ವರ್ಷಪೂರ್ತಿ ಪಾಠಪ್ರವಚನಗಳಿಂದ ವಂಚಿತರಾಗಿರುವ ಮಕ್ಕಳುಗಳಿಗೆ ಪ್ರೊಮೋಶನ್ ಕೊಡುವ ಬಗ್ಗೆ ಸರ್ಕಾರದ ನೀತಿ ಏನು?

ಡಾ. ಹೆಗ್ಗಪ್ಪ ಡಿ. ಲಮಾಣಿ.
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)
ಪ್ರಾಥಮಿಕ ಶಿಕ್ಷಕರು

ರಾಜ್ಯದಲ್ಲಿ ದಿನಾಂಕ ೩೦-೬-೯೨ರವರೆಗೆ ಇರುವ ಒಟ್ಟಾರೆ ಪ್ರಾಥಮಿಕ ಶಿಕ್ಷಕರ ಖಾಲಿ ಹುದ್ದೆಗಳ ಸಂಖ್ಯೆ ೧೩,೧೪೯ ಇವೆ.
ಪ್ರೌಢಶಾಲಾ ಶಿಕ್ಷಕರು

ಸರ್ಕಾರಿ ಪ್ರೌಢಶಾಲೆಗಳಲ್ಲಿ ೧೪೦೫ ಶಿಕ್ಷಕರ ಖಾಲಿ ಹುದ್ದೆಗಳು ಇರುತ್ತವೆ.
ಪ್ರಾಥಮಿಕಶಿಕ್ಷಕರ ಬಗ್ಗೆ:-

ದಿನಾಂಕ ೧-೩-೯೦ ರಿಂದ ೩೧-೫-೯೧ರವರೆಗೆ ಖಾಲಿ ಇದ್ದ ೧೩೬೨೩ ಹುದ್ದೆಗಳ ಪೈಕಿ ೫೪೫೫ ಹುದ್ದೆಗಳನ್ನು ಮೊದಲನೇ ಹಂತದಲ್ಲಿ ಈಗಾಗಲೇ ಭರ್ತಿ ಮಾಡಲಾಗಿದೆ. ಇನ್ನು ೧೩೬೬ ಹುದ್ದೆಗಳನ್ನು ಭರ್ತಿಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಇನ್ನುಳಿದ ೬೪೧೨ ಹುದ್ದೆಗಳನ್ನು ಎರಡನೇ ಹಂತದಲ್ಲಿ ವಿಶೇಷ ನೇಮಕಾತಿ ನಿಯಮಗಳಡಿಯಲ್ಲಿ ಭರ್ತಿಮಾಡಲಾಗುವುದು ಅನಂತರ ೧-೬-೯೨ರಿಂದ ೩೦-೬-೯೨ರವರೆಗಿನ ಅವಧಿಯಲ್ಲಿ ಖಾಲಿ

ಇದ್ದ ೪೯೧೧ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಪ್ರೌಢಶಾಲಾ ಶಿಕ್ಷಕರನ್ನು ದರ್ಜೆ ಮತ್ತು ನೇಮಕಾತಿನಿಯಮದಂತೆ ಬರುವ ಶೈಕ್ಷಣಿಕ ವರ್ಷದ ಪ್ರಾರಂಭದೊಳಗಾಗಿ ಭರ್ತಿ ಮಾಡಲು ಎಲ್ಲಾ ಪ್ರಯತ್ನ ಮಾಡಲಾಗುವುದು.

ರಾಜ್ಯದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ವರ್ಷಪೂರ್ತಿ ಪಾಠಪ್ರವಚನಗಳಿಲ್ಲದೇ ಮಕ್ಕಳು ತೊಂದರೆಗೀಡಾದ ಬಗ್ಗೆ ಯಾವ ವರದಿ ಬಂದಿಲ್ಲ. ಆದುದರಿಂದ ಪರೀಕ್ಷೆ ನಡೆಸದೆ ಪ್ರೊಮೋಶನ್ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಒಂದನೇ ಹಾಗೂ ಎರಡನೇ ತರಗತಿ ಮಕ್ಕಳಿಗೆ ಸಾಕಷ್ಟು ಹಾಜರಾತಿ ಇದ್ದಲ್ಲಿ ಪ್ರಮೋಶನ್ ನೀಡಲಾಗುವುದು.

ಶ್ರೀ ಜಿ. ರಾಜುಗೌಡ:- ಸ್ವಾಮಿ, ನೀವು ಕೊಟ್ಟಿರತಕ್ಕ ಅಂಕಿಅಂಶ ಒಂದಕ್ಕೊಂದು ತಾಳೆಯಾಗುತ್ತಿಲ್ಲ. ೧೩-೩-೯೦ ರಿಂದ ೩೧-೫-೯೧ರವರೆಗೆ ಖಾಲಿ ಇದ್ದ ಹುದ್ದೆಗಳು ೧೩ ಸಾವಿರ. ಇಷ್ಟನ್ನು ಭರ್ತಿ ಮಾಡಬೇಕಾಗಿದೆ ಎಂದು ಹೇಳುತ್ತಿದ್ದೀರಿ. ಬಹುಶಃ ಈ ಇಲಾಖೆಯನ್ನು ಯಾವುದೇ ಸಚಿವರ ಕೈಗೆ ಕೊಟ್ಟರೂ ಯಾವುದೇ ಅವಧಿಯಲ್ಲಿ ಈ ಹುದ್ದೆಗಳನ್ನು ತುಂಬುವುದಕ್ಕಾಗಿಲ್ಲ. ರಂಗನಾಥ ಅವರು ಇದ್ದಾಗಲೂ ಇಷ್ಟೇ ಹುದ್ದೆಗಳು ಖಾಲಿ ಇದ್ದವು. ಈಗಲೂ ಇಷ್ಟೇ ಇವೆ. ಕೆಲವು ಹುದ್ದೆಗಳನ್ನು ಭರ್ತಿ ಮಾಡಿದ ತಾರೀಖನ್ನು ಹೇಳುತ್ತಿದ್ದೀರಿ. ಎಷ್ಟು ಮಂಜೂರಾದ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆಯೆ ? ನಿಖರವಾಗಿ ಉತ್ತರ ಹೇಳಿ.

ಡಾ. ಹೆಗ್ಗಪ್ಪ ಡಿ. ಲಮಾಣಿ:- ಮಾನ್ಯ ಅಧ್ಯಕ್ಷರೆ, ಇಲ್ಲಿ ೧೩೧೪೪ ಹುದ್ದೆಗಳನ್ನು ಆ ಸಮಯದಲ್ಲಿ ಖಾಲಿ ಇರುವುದು. ಅದರಲ್ಲಿ ಈಗಾಗಲೇ ೫೪೫೫ ಹುದ್ದೆಗಳನ್ನು ತುಂಬಿದ್ದೇವೆ. ಮುಂದೆ ೧೩೬೬ ಹುದ್ದೆಗಳು ಏನಿವೆ, ಅವುಗಳನ್ನು ಆ ಸಮಯದಲ್ಲಿ ಅಂದರೆ ೫೪೫೫ ಹುದ್ದೆಗಳನ್ನು ಏನು ತುಂಬಿಕೊಂಡಿದ್ದೆವು ಆಗ ವೆಯಿಟಿಂಗ್ ಲಿಸ್ಟ್ ಎಂದು ಮಾಡಿದ್ದೆವು. ೨೫ ಪರ್ಸೆಂಟ್ ವೆಯಿಟಿಂಗ್ ಲಿಸ್ಟ್ ಮಾಡಬೇಕಾಗುತ್ತದೆ. ಆ ವೆಯಿಟಿಂಗ್ ಲಿಸ್ಟ್‌ನಲ್ಲಿದ್ದ ಅಭ್ಯರ್ಥಿಗಳನ್ನು ಈಗಾಗಲೇ ತುಂಬಿಕೊಳ್ಳುವುದಕ್ಕೆ ಜಾಯಿಂಟ್ ಡೈರೆಕ್ಟರಿಗೆ ತಿಳಿಸಿದ್ದೇವೆ. ಅವರನ್ನು ತೆಗೆದುಕೊಳ್ಳುವಂಥ ಕ್ರಮ ಕೈಗೊಳ್ಳುತ್ತಿದ್ದಾರೆ. ಇನ್ನೂ ೬೮೧೨ ಹುದ್ದೆಗಳನ್ನು ನಾವು ವಿಶೇಷ ನೇಮಕಾತಿ ನಿಯಮಗಳನ್ವಯ ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿದ್ದೇವೆ. ಈಗಾಗಲೇ ಆ ಕಾರ್ಯಕ್ರಮ ನಡೆದಿದೆ. ನೂರು ದಿನದ ಕಾರ್ಯ ಯೋಜನೆಯಲ್ಲಿ ಆಷ್ಟು ಅಧ್ಯಾಪಕರನ್ನು ತುಂಬಿಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ೨೯ಕ್ಕಿಂತ ಹೆಚ್ಚು ವಯಸ್ಸಾದವರನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಸ್ಪೆಶಲ್ ರೆಕ್ರೂಟ್‌ಮೆಂಟ್ ರೂಲ್ಸ್ ಅನ್ನು ಈಗಾಗಲೇ ಮಾಡಿದ್ದೇವೆ, ಮತ್ತು ಅದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಿಕೊಡುವ ಹಂತದಲ್ಲಿದ್ದೇವೆ. ಆದು, ಆದರೆ ನಾವು ೬೮೧೨ ಹುದ್ದೆಗಳನ್ನು ಆದಷ್ಟು ಬೇಗ ತುಂಬಿಕೊಳ್ಳುವ ವ್ಯವಸ್ಥೆ ಮಾಡುತ್ತೇವೆ. ಇನ್ನು ಉಳಿದಂತ ೪೯೧೧ ಹುದ್ದೆಗಳನ್ನು ಜನರಲ್ ರೆಕ್ರೂಟ್‌ಮೆಂಟ್‌ನಲ್ಲಿ ತೆಗೆದುಕೊಳ್ಳುತ್ತಿದ್ದೇವೆ. ಸ್ಪೆಶಲ್ ರೆಕ್ರೂಟ್‌ಮೆಂಟ್‌ನಲ್ಲಿ ೬೮೧೨ ಅಧ್ಯಾಪಕರ ಹುದ್ದೆಗಳನ್ನು ಮತ್ತು ಜನರಲ್ ರೆಕ್ರೂಟ್‌ಮೆಂಟ್‌ನಲ್ಲಿ ೪೯೧೧ ಅಧ್ಯಾಪಕರ ಹುದ್ದೆಗಳನ್ನು ತುಂಬುವ ವ್ಯವಸ್ಥೆ ಮಾಡುತ್ತಿದ್ದೇವೆ. ಹಂತಹಂತವಾಗಿ ಆದಷ್ಟು ಬೇಗ ಎಲ್ಲಾ ಖಾಲಿ ಇರತಕ್ಕ ಸ್ಥಾನಗಳನ್ನು ತುಂಬುವ ವ್ಯವಸ್ಥೆ ಮಾಡುತ್ತಿದ್ದೇವೆ.

ಶ್ರೀ ಜಿ. ರಾಜುಗೌಡ:- ತಾವು ಹೇಳತಕ್ಕ ವಿಷಯ ೧೯೯೦-೯೧ರದ್ದು. ಇತ್ತೀಚೆಗೆ ಮಂಜೂರಾದ ಹುದ್ದೆಗಳು ಎಷ್ಟು ? ಆದರ ಬಗ್ಗೆ ಹೇಳಲಿಲ್ಲ. ಇವತ್ತಿನ ದಿವಸ ಶಿಕ್ಷಕರು ಇಲ್ಲದೆ ಎಷ್ಟು ಮಕ್ಕಳು ವಂಚಿತರಾಗಿದ್ದಾರೆ ? ವಂಚಿತರು ಎಂದರೆ ಏನು ಅರ್ಥ ಅಂದರೆ ಒಬ್ಬ ಶಿಕ್ಷಕರಿಗೆ ಎಷ್ಟು ವಿದ್ಯಾರ್ಥಿಗಳು ಇರಬೇಕು ಆದಕ್ಕಿಂತ ಜಾಸ್ತಿ ಇದ್ದರೆ ಮಕ್ಕಳು ವಂಚಿತರಾದರು ಎಂದೇ ಅರ್ಥ. ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅನುಪಾತ ಏನು ಎಂದು ತಿಳಿಸಬೇಕು. ಇತ್ತೀಚೆಗೆ

ಸಚಿವ ಸಂಪುಟದ ಆಚಾರ ಸಂಹಿತೆಯ ಪ್ರಕಾರ ಒಂದು ಆಜ್ಞೆ ಬಂದಿದೆ. ಅದರ ಪ್ರಕಾರ ಯಾವುದೇ ಕಡತವನ್ನು ೧೫ ದಿನಗಳಲ್ಲಿ ಎಲೇವಾರಿ ಮಾಡುತ್ತೇವೆಂದು ಹೇಳಿದ್ದಾರೆ. ಆ ಆಜ್ಞಾನುಸಾರ ಬೆಳಗೆ ಈ ಕೆಲಸ ಪೂರೈಸುವ ವ್ಯವಸ್ಥೆ ಮಾಡುತ್ತೀರಾ ? ಯಾವುದೂ ಬಾಕಿ ಇರಬಾರದು.

ಡಾ. ಹೆಗ್ಗಪ್ಪ ಡಿ. ಲಮಾಣಿ :- ಈಗ ಮಂಜೂರಾಗಿದ್ದ ಹುದ್ದೆಗಳನ್ನು ಹೇಳಿದೆ. ರಿಟೈರ್‌ಮೆಂಟ್ ಆದವರು, ಖಾಲಿ ಬಿದ್ದ ಹುದ್ದೆಗಳು ೧೩ ಸಾವಿರ, ಅವನ್ನು ತುಂಬುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ೧೫ ದಿನಗಳೊಳಗೆ ಕಡತ ಎಲೇವಾರಿ ಮಾಡಬೇಕೆಂಬ ಆಚಾರ ಸಂಹಿತೆ ಬಗ್ಗೆ ಹೇಳಿದರು. ಅದನ್ನೂ ಸಹಾ ಪ್ರಯತ್ನ ಮಾಡುತ್ತಿದ್ದೇವೆ. ಅವರ ಬಗ್ಗೆ ಸಾಕಷ್ಟು ಕಾಳಜಿ ವಹಿಸಿದ್ದೇವೆ. ಆಚಾರ ಸಂಹಿತೆ ಪಾಲಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಕೆಲವು ವಿದ್ಯಾರ್ಥಿಗಳು ಅಧ್ಯಯನದಿಂದ ವಂಚಿತರಾಗಿದ್ದಾರೆಂದು ಹೇಳುತ್ತಿದ್ದಾರೆ. ಅಂತಹ ವರದಿ ನಮಗೆ ಬಂದಿಲ್ಲ. ಏಕೆಂದರೆ ಒಂದು ಶಾಲೆಯಲ್ಲಿ ಅಧ್ಯಾಪಕರು ಕಡಿಮೆ ಆದರು ಎಂದರೆ ಬೇರೆ ಶಾಲೆಯಿಂದ ಡೆಪ್ಯೂಟ್ ಮಾಡಿ ಅವರಿಗೆ ಅಭ್ಯಾಸ ಮಾಡುವುದಕ್ಕೆ ಅನುಕೂಲ ಮಾಡಿಕೊಡುತ್ತೇವೆ. ಒಂದು ಹೈಸ್ಕೂಲಿನಲ್ಲಿ ಯಾವುದೇ ವಿಷಯದ ಅಧ್ಯಾಪಕರ ಕೊರತೆ ಬಂದರೆ ಬೇರೆ ಹೈಸ್ಕೂಲಿನಿಂದ ಡೆಪ್ಯೂಟ್ ಮಾಡಿ, ಶಿಕ್ಷಣ ಕೊಡುವ ವ್ಯವಸ್ಥೆ ಮಾಡುತ್ತೇವೆ. ಇಲ್ಲಿ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳದೇ ಹಾಗೇ ಪ್ರಮೋಷನ್ ತೆಗೆದುಕೊಳ್ಳುವ ಪ್ರಶ್ನೆ ಬರುವುದಿಲ್ಲ. ಅವರಿಗೆ ಪರೀಕ್ಷೆ ಬೇಕಾಗುತ್ತದೆ. ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಿದ್ದಾರೆನ್ನುವುದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಎಲ್ಲಾ ರೀತಿಯಿಂದ ವ್ಯವಸ್ಥೆ ಮಾಡಿ ಶಿಕ್ಷಣ ಕೊಡಿಸಿದ್ದೇವೆ. ಪರೀಕ್ಷೆ ತೆಗೆದುಕೊಳ್ಳುತ್ತಿದ್ದಾರೆ. ಪರೀಕ್ಷೆ ಪಾಸ್ ಆದಮೇಲೆ ಮುಂದಿನ ಕ್ಲಾಸ್‌ಗೆ ಕಳುಹಿಸುತ್ತೇವೆ.

ಶ್ರೀ ಜಿ. ರಾಜುಗೌಡ:- ಪರೀಕ್ಷೆ ಇಲ್ಲದೇ ಪ್ರಮೋಶನ್ ಕೊಟ್ಟಿದ್ದೀರಿ. ಪರೀಕ್ಷೆ ತೆಗೆದುಕೊಂಡಿಲ್ಲ ಎಂದು ಹೇಳಿದ್ದೀರಿ. ಅದಕ್ಕೆ ಉತ್ತರ ಕೊಡಿ. (ಉತ್ತರ ಇಲ್ಲ)

ಅಧ್ಯಕ್ಷರು :- ಈಗ ಮುಂದಿನ ಪ್ರಶ್ನೆ.

ವಿಷಯ :- ಹೊಳಲ್‌ಕೆರೆ ಆಸ್ಪತ್ರೆಗೆ ಸೌಲಭ್ಯಗಳನ್ನು ಒದಗಿಸದಿರುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೨:- (೧೭)
ಶ್ರೀ ಎ.ವಿ. ಉಮಾಪತಿ (ಹೊಳಲ್ಕೆರೆ)
ಮಾನ್ಯ ಮುಖ್ಯಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹೊಳಲ್‌ಕೆರೆ ಆಸ್ಪತ್ರೆಯು ಈವರೆಗೆ ಪ್ರಾಥಮಿಕ ಆರೋಗ್ಯ ಘಟಕವಾಗಿ ೩೦ ಹಾಸಿಗೆಗಳನ್ನು ಮಾತ್ರ ಹೊಂದಿದ್ದು ಈಗ ಸಾರ್ವಜನಿಕ ಆಸ್ಪತ್ರೆಯಾಗಿ ಪರಿವರ್ತನೆಗೊಂಡಿದ್ದರೂ ಸಹ ಸಾರ್ವಜನಿಕ ಆಸ್ಪತ್ರೆಗೆ ಒದಗಿಸಬೇಕಾದ ಸೌಲಭ್ಯಗಳನ್ನು ಒದಗಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ಸದರಿ ಜನರಲ್ ಆಸ್ಪತ್ರೆಗೆ ೧೦೦ ಹಾಸಿಗೆಗಳನ್ನಾದರೂ ಒದಗಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುವುದೇ?

ಮುಖ್ಯ ಮಂತ್ರಿಗಳ ಪರವಾಗಿ ಶ್ರೀ ಬ್ಲೇಸಿಯಸ್ ಎಂ. ಡಿಸೋಜ್
(ಕಾರ್ಮಿಕ ಸಚಿವರು)

ಹೊಳಲ್‌ಕೆರೆ ಆಸ್ಪತ್ರೆಯನ್ನು ಸಾರ್ವಜನಿಕ ಆಸ್ಪತ್ರೆಯಾಗಿ ಪರಿವರ್ತಿಸಿರುವುದಿಲ್ಲ. ಅದನ್ನು ೩೦ ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವಾಗಿ ಪರಿವರ್ತಿಸಲಾಗಿರುತ್ತದೆ.